# ಪಾತ್ರೆಯಾಕಾರದ ಬಾವಿ

ಚಿತ್ರದಲ್ಲಿರುವುದು ಅಪರೂಪದ ವಿನ್ಯಾಸದ ಬಾವಿ. ಬಾವಿಯ ಸುತ್ತ ಕಲ್ಲಿನಿಂದ ಕಟ್ಟೆ ಕಟ್ಟುವ ಬದಲು ಸಿಮೆಂಟಿನಿಂದ ಪಾತ್ರೆಯ ರೂಪದಲ್ಲಿ ನಿರ್ಮಿಸಿ, ಬಣ್ಣದಿಂದ ಅದು ಹಿತ್ತಾಳೆಯ ಪಾತ್ರೆಯಂತೆ ಗೋಚರಿಸುವಂತೆ ಮಾಡಲಾಗಿದೆ. ಅಲ್ಲದೆ ಗಡಗಡೆಯನ್ನು ಢಮರುಗವುಳ್ಳ ತ್ರಿಶೂಲಕ್ಕೆ ನೇತು ಹಾಕಿರುವುದು ಇನ್ನೊಂದು ವಿಶೇಷ. ದಕ್ಷಿಣ ಕನ್ನಡದ ಕುಂದಾಪುರದ ಗಜಪುರದಲ್ಲಿ ಉಮಾ ಮಹೇಶ್ವರ ದೇವಾಲಯದ ಎದುರಿದೆ ಈ ವಿಶೇಷ ಬಾವಿ.

**-ದೇವಿದಾಸ ಸುವರ್ಣ, ಅಂಕೋಲಾ**





# ಅಪರೂಪದ ಬಾಟಲಿ

ಸಾಮಾನ್ಯವಾಗಿ ಗಾಜಿನ ಬಾಟಲಿಗಳು ಬಳಕೆಯಾದ ಬಳಿಕ ಮೂಲೆ ಅಥವ ಗುಜರಿ ಅಂಗಡಿ ಸೇರುತ್ತವೆ. ಆದರೆ ಈ ಗಾಜಿನ ಬಾಟಲಿ ಅಪರೂಪದ್ದಾಗಿದ್ದು ಸಂಗ್ರಹಯೋಗ್ಯವಾಗಿದೆ. ಬಾಟಲಿ ಕಂಡು ಹಲವರು ವಿಸ್ಮಯ ವ್ಯಕ್ತಪಡಿಸಿದ್ದಾರೆ. ಈ ಗಾಜಿನ ಬಾಟಲಿಯು 18 ಇಂಚು ಎತ್ತರವಿದ್ದು, ವ್ಯಾಸ 24 ಇಂಚು. 3 ಕೆ.ಜಿ ಭಾರವಿದ್ದು, 5 ಲೀಟರ್ ನೀರು ತುಂಬಿಸಬಹುದು. ಯಾರೋ ಅನುಪಯುಕ್ತ ಬಾಟಲಿ ಎಂದು ರಸ್ತೆ ಬದಿಯಲ್ಲಿ ಎಸೆದಿದ್ದರು. ಅದನ್ನು ನಾನು  ಆರಿಸಿ ತಂದು ಶುಚಿಗೊಳಿಸಿ ಸಂಗ್ರಹದಲ್ಲಿ ಇಟ್ಟುಕೊಂಡಿದ್ದೆನೆ.

**-ತಾರಾನಾಥ್ ಮೇಸ್ತ, ಕುಂದಾಪುರ**



# ವರಕವಿ ಬೇಂದ್ರೆಯ ತೈಲ ಚಿತ್ರ

ವರಕವಿ ದ.ರಾ.ಬೇಂದ್ರೆಯವರ ಅಪರೂಪದ ತೈಲ ಚಿತ್ರವಿದು. ಕಲಾವಿದ ಕೆ. ವಿ. ಕಾಳೆ ಅವರ ಕುಂಚದಿಂದ ಮೂಡಿ ಬಂದಿರುವ ಈ ಚಿತ್ರ ಬಹಳ ಆಕರ್ಷಕವಾಗಿದೆ. ಇಂತಹದೊಂದು ಅಪರೂಪದ ಕಲಾಕೃತಿ ಧಾರವಾಡದ ಸಾಧನಕೇರಿಯಲ್ಲಿರುವ ಬೇಂದ್ರೆ ಭವನದಲ್ಲಿ ನೋಡಲು ಸಿಗುತ್ತದೆ.

**-ಪಂಪಾಪತಿ ಹಿರೇಮಠ, ಧಾರವಾಡ**